ವಾಣಿಜ್ಯ ತೆರಿಗೆಗಳ ಇಲಾಖೆ

ಸಂಖ್ಯೆ: ಡಬ್ಲ್ಯೂ.ಪಿ. 33287/2016–'17

ವಾಣಿಜ್ಯ ತೆರಿಗೆ ಆಯುಕ್ತರವರ ಕಛೇರಿ,
ವಾಣಿಜ್ಯ ತೆರಿಗೆ ಕಾರ್ಯಾಲಯ,
ಬೆಂಗಳೂರು–560 009.
ದಿನಾಂಕ: 25–05–2017.

**ಸುತ್ತೋಲೆ ಸಂ: 3/2017–'18**

**ವಿಷಯ:** ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ ಡಬ್ಲ್ಯೂ.ಪಿ. ಸಂಖ್ಯೆ 33287/2016 ಪ್ರಕರಣದಲ್ಲಿ ದಿನಾಂಕ 28–04–2017 ರಂದು ನೀಡಿದ ನಿರ್ಧೇಶನದಂತೆ ಬಾಕಿ ಇರುವ ಪರಿಷ್ಕರಣೆ ಮತ್ತು ಮನವಿ ಪ್ರಕರಣಗಳನ್ನು ಶೀಘ್ರಗತಿಯಲ್ಲಿ ವಿಲೇವಾರಿ ಆಗುವಂತೆ ಸಂಬಂಧಪಟ್ಟ ಅಧಿಕಾರಿಗಳ ಕಾರ್ಯನಿರ್ವಹಣೆಯನ್ನು ಮೇಲ್ವಿಚಾರಣೆ ಮಾಡಲು ಮೇಲುಸ್ತುವಾರಿ ಕೋಶ (Monitoring Cell) ವನ್ನು ರಚಿಸುವ ಬಗ್ಗೆ.

ದಿನಾಂಕ 31.03.2017 ರಂತೆ ಇಲಾಖೆಯಲ್ಲಿ ಪರಿಷ್ಕರಣೆ ಮತ್ತು ಮನವಿ ಹಂತದಲ್ಲಿ 4656 ಪ್ರಕರಣಗಳು ವಿಲೇವಾರಿಗೆ ಬಾಕಿ ಇರುತ್ತವೆ. ಇವುಗಳಲ್ಲಿ 5 ವರ್ಷಕ್ಕಿಂತ ಹೆಚ್ಚಿನ ಹಳೆಯ ಒಟ್ಟು 250 ಪ್ರಕರಣಗಳು, 2 ರಿಂದ 5 ವರ್ಷದೊಳಗಿನ ಒಟ್ಟು 823 ಪ್ರಕರಣಗಳು, 1 ರಿಂದ 2 ವರ್ಷದೊಳಗಿನ 1072 ಪ್ರಕರಣಗಳು, 6 ತಿಂಗಳಿನಿಂದ 1 ವರ್ಷದೊಳಗಿನ 1089 ಪ್ರಕರಣಗಳು ಹಾಗೂ 6 ತಿಂಗಳುಗಳ ಒಳಗಿನ 1422 ಪ್ರಕರಣಗಳು ವಿಲೇವಾರಿಗಾಗಿ ಬಾಕಿ ಇರುತ್ತವೆ. ಈ ಪ್ರಕರಣಗಳಲ್ಲಿ ಒಳಗೊಂಡ ಒಟ್ಟು ಮೊತ್ತ ರೂ. 3425 ಕೋಟಿ ಇದ್ದು, ಇವುಗಳಲ್ಲಿ ಮುಖ್ಯವಾಗಿ ಮೆ. ಬಿ.ಇ.ಎಲ್, ಬೆಂಗಳೂರು ಪ್ರಕರಣದಲ್ಲಿ ರೂ. 903 ಕೋಟಿ, ಮೆ. ಓಬಳಾಪುರಂ ಮೈನಿಂಗ್ ಕಂಪನಿ, ಬಳ್ಳಾರಿ ಪ್ರಕರಣದಲ್ಲಿ ರೂ. 641 ಕೋಟಿ, ಮೆ. ಡೆಲ್ ಇಂಡಿಯಾ ಪ್ರಕರಣದಲ್ಲಿ ರೂ. 128 ಕೋಟಿ (ತಡೆಯಾಜ್ಞೆ ಇದೆ), ಮೆ.ಪಾನ್ ಪಾರಾಗ್ ಇಂಡಿಯಾ ಲಿ., ಬೆಂಗಳೂರು ಪ್ರಕರಣದಲ್ಲಿ ರೂ. 37 ಕೋಟಿ ಮತ್ತು ಮೆ. ಸ್ವಸ್ತಿಕ್ ಮಿನರಲ್ಸ್, ಬಳ್ಳಾರಿ ಪ್ರಕರಣದಲ್ಲಿ ರೂ. 32 ಕೋಟಿ (ಈ 5 ಪ್ರಕರಣಗಳಲ್ಲಿ ಒಟ್ಟು ರೂ. 1741 ಕೋಟಿ) ಇರುವುದು ಕಂಡು ಬಂದಿರುತ್ತದೆ.

ಮೇಲೆ ನಮೂದಿಸಿದ ಒಟ್ಟು 4656 ಪ್ರಕರಣಗಳ ಪೈಕಿ 903 ಪ್ರಕರಣಗಳಲ್ಲಿ ಮಾತ್ರ ತಡೆಯಾಜ್ಞೆ ನೀಡಲಾಗಿದ್ದು, ಇಂತಹ ತಡೆಯಾಜ್ಞೆ ಪ್ರಕರಣಗಳಲ್ಲಿ ಒಳಗೊಂಡಿರುವ ಒಟ್ಟು ಮೊತ್ತ ರೂ. 655 ಕೋಟಿ ಆಗಿರುತ್ತದೆ. ಇನ್ನುಳಿದ 3753 ಪ್ರಕರಣಗಳಲ್ಲಿ ಒಳಗೊಂಡಿರುವ ಒಟ್ಟು ರೂ. 2770 ಕೋಟಿ ಮೊತ್ತದ ಮೇಲೆ ಯಾವುದೇ ತಡೆಯಾಜ್ಞೆ ಇಲ್ಲದಿರುವುದು ಕಂಡು ಬರುತ್ತದೆ. ಈ ತಡೆಯಾಜ್ಞೆ ಇಲ್ಲದ ಪ್ರಕರಣಗಳ ಪೈಕಿ ರೂ. 173.00 ಕೋಟಿ ತೆರಿಗೆಯನ್ನು ಸಂಗ್ರಹಿಸಿದ್ದು, ಇನ್ನೂ ರೂ. 2597 ಕೋಟಿ ಬಾಕಿ ತೆರಿಗೆಯನ್ನು ವಸೂಲಿ ಮಾಡಲು ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳು ವಸೂಲಿ ಕ್ರಮವನ್ನು ಕೈಗೊಂಡಿದ್ದರೂ ಕೂಡ ಪರಿಣಾಮಕಾರಿಯಾಗಿ ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ.

ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ಇಲಾಖೆಯಲ್ಲಿ ಪರಿಷ್ಕರಣೆ ಮತ್ತು ಮನವಿ ಹಂತದಲ್ಲಿ (Quasi-judicial Proceedings) ಮೇಲೆ ತಿಳಿಸಿದಂತೆ ತುಂಬಾ ಪ್ರಕರಣಗಳು ಬಹಳ ಸಮಯದಿಂದ ವಿಲೇವಾರಿಗಾಗಿ ಬಾಕಿ ಇರುವುದನ್ನು ಗಮನಿಸಿ, ಇವುಗಳನ್ನು ಸರ್ಕಾರದ ರಾಜ್ಯಸ್ವದ ಹಿತ ದೃಷ್ಟಿಯಿಂದ ಶೀಘ್ರ ವಿಲೇವಾರಿ ಮಾಡಲು ಮತ್ತು ಈ ಕಾರ್ಯವನ್ನು ನಿರ್ವಹಿಸುವ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಮನವಿಗಳು) ರವರುಗಳ ಕಾರ್ಯಪ್ರಗತಿಯನ್ನು ಪರಿಣಾಮಕಾರಿಯಾಗಿ ಮೇಲುಸ್ತುವಾರಿ ಮಾಡಲು ಮೇಲುಸ್ತುವಾರಿ ಕೋಶ (Monitoring Cell) ವನ್ನು ರಚಿಸುವ ಬಗ್ಗೆ ಪರಿಗಣಿಸಲು ಸೂಚಿಸಿದೆ. ಈಗಾಗಲೇ ಈ ಅಧಿಕಾರಿಗಳ ಕಾರ್ಯಪ್ರಗತಿಯನ್ನು ಮಾನ್ಯ ಮುಖ್ಯಮಂತ್ರಿಗಳು, ವಾಣಿಜ್ಯ ತೆರಿಗೆ ಆಯುಕ್ತರು ಮತ್ತು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು ಆಗಿಂದಾಗ್ಗೆ ಪ್ರಗತಿ ಪರಿಶೀಲನೆಗೆ ಕೈಗೊಳ್ಳುತ್ತಿದ್ದರೂ, ಈ ಬಗ್ಗೆ ಪರಿಣಾಮಕಾರಿಯಾಗಿ ಕ್ರಮಕೈಗೊಳ್ಳಲು ಮೇಲುಸ್ತುವಾರಿ ಕೋಶ (Monitoring Cell) ವನ್ನು ರಚಿಸಲು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು ನೀಡಿರುವ ಸೂಚನೆಯು ಸೂಕ್ತವೆಂದು ಕಂಡುಬಂದಿರುತ್ತದೆ. ಅದರಂತೆ ಮೇಲುಸ್ತುವಾರಿ ಕೋಶವನ್ನು (Monitoring Cell) ರಚಿಸಿ, ಅದಕ್ಕೆ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕಾನೂನು ವ್ಯವಹಾರಗಳು) ಇವರನ್ನು ಮುಖ್ಯಸ್ಥರನ್ನಾಗಿರಿಸಿ, ಆ ವಿಭಾಗದ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು ಹಾಗೂ ಇತರ ಅಧಿಕಾರಿಗಳನ್ನು ಸದಸ್ಯರನ್ನಾಗಿ ಮಾಡುವುದು, ಈ ಕೋಶವು ರಾಜ್ಯದ ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) ಇವರುಗಳ ಕಾರ್ಯನಿರ್ವಹಣೆಯನ್ನು ಪ್ರತಿ ತಿಂಗಳಿಗೊಮ್ಮೆ ಮೇಲುಸ್ತುವಾರಿ ಮಾಡುವುದು ಹಾಗೂ ಮನವಿ ಹಂತದಲ್ಲಿರುವ ಎಲ್ಲಾ ಹಳೆಯ ಮತ್ತು ಚಾಲ್ತಿ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಪರಿಶೀಲಿಸಿ ಸೂಕ್ತ ನಿರ್ದೇಶನ ನೀಡುವುದು ಹಾಗೂ ಈ ಬಗ್ಗೆ ಸಂಬಂಧಪಟ್ಟ ವಿಭಾಗಗಳ ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ) ರವರುಗಳು ಮುಂದಿನ ಕ್ರಮಕೈಗೊಂಡು ರಾಜ್ಯಸ್ವವನ್ನು ಪರಿಣಾಮಕಾರಿಯಾಗಿ ಸಂಗ್ರಹಿಸಲು ಅನುವು ಆಗುವಂತೆ ಆದೇಶ ಮಾಡುವುದು ಸೂಕ್ತವಾಗಿರುತ್ತದೆ.

ಅದರಂತೆ ರಾಜ್ಯದ ಎಲ್ಲಾ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು) ರವರುಗಳ ಕಾರ್ಯನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಪರಿಶೀಲಿಸಲು ಮತ್ತು ಎಲ್ಲಾ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕಾನೂನು ವ್ಯವಹಾರಗಳು) ಇವರನ್ನು ಮುಖ್ಯಸ್ಥರನ್ನಾಗಿ, ಆ ವಿಭಾಗದ ಜಂಟಿ ಆಯುಕ್ತರು ಮತ್ತು ಇತರ ಅಧಿಕಾರಿಗಳ ಸದಸ್ಯರನ್ನೊಳಗೊಂಡಂತೆ ಮೇಲುಸ್ತುವಾರಿ ಕೋಶ (Monitoring Cell) ವನ್ನು ರಚಿಸಲಾಗಿದೆ. ಈ ಕೋಶವು ರಾಜ್ಯದ ಎಲ್ಲಾ ಮನವಿ ಅಧಿಕಾರಿಗಳ ಕಾರ್ಯನಿರ್ವಹಣೆಯನ್ನು ಪ್ರತಿ ತಿಂಗಳಿಗೊಮ್ಮೆ ಮೇಲುಸ್ತುವಾರಿ ಮಾಡಿ ಮನವಿ ಪ್ರಕರಣಗಳನ್ನು ಶೀಘ್ರ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಂಡು ಈ ಬಗ್ಗೆ ವಸೂಲಿ ಕ್ರಮಗಳನ್ನು ಕೈಗೊಳ್ಳಲು ಸಂಬಂಧಪಟ್ಟ ವಿಭಾಗಗಳ ಜಂಟಿ ಆಯುಕ್ತರು (ಆಡಳಿತ) ರವರುಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ, ಈ ಬಗ್ಗೆ ವರದಿಯನ್ನು ವಾಣಿಜ್ಯ ತೆರಿಗೆಗಳ ಆಯುಕ್ತರಿಗೆ ಸಲ್ಲಿಸಲು ಆದೇಶಿಸಲಾಗಿದೆ.

(ರಿತ್ವಿಕ್ ಪಾಂಡೆ)

ರಿತ್ವಿಕ್ ಪಾಂಡೆ, ಭಾ.ಆ.ಸೇ.,
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ), ಬೆಂಗಳೂರು.

ಸುತ್ತೋಲೆಯ ಪ್ರತಿಯನ್ನು:

1. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕಾನೂನು ವ್ಯವಹಾರಗಳು) ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)–1 ಇವರಿಗೆ ಮಾಹಿತಿಗಾಗಿ.
3. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕೇಂದ್ರ ಕಛೇರಿ)–2 ಇವರಿಗೆ ಮಾಹಿತಿಗಾಗಿ.
4. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಕಾನೂನು & ಕಾರ್ಯನೀತಿ) ಇವರಿಗೆ ಮಾಹಿತಿಗಾಗಿ.
5. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಗು.ವಾ. & ಸಮನ್ವಯ) ಇವರಿಗೆ ಮಾಹಿತಿಗಾಗಿ.
6. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಸರಕು ಮತ್ತು ಸೇವಾ ತೆರಿಗೆ) ಇವರಿಗೆ ಮಾಹಿತಿಗಾಗಿ.
7. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾಗೃತಿ) ಇವರಿಗೆ ಮಾಹಿತಿಗಾಗಿ.
8. ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ವಲಯ)–1, 2 & 3 ಇವರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
9. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಮನವಿಗಳು), ಬೆಂಗಳೂರು ನಗರ ವಿಭಾಗ–1, 2, 3, 4, 5, 6, ಮೈಸೂರು, ಮಲೆನಾಡು, ಮಂಗಳೂರು, ಧಾರವಾಡ, ಬೆಳಗಾವಿ, ಕಲಬುರಗಿ & ದಾವಣಗೆರೆ ಇವರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
10. ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಬೆಂಗಳೂರು ನಗರ ವಿಭಾಗ–1, 2, 3, 4, 5, 6, ಮೈಸೂರು, ಮಲೆನಾಡು, ಮಂಗಳೂರು, ಧಾರವಾಡ, ಬೆಳಗಾವಿ, ಕಲಬುರಗಿ & ದಾವಣಗೆರೆ ಇವರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.